ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆ ಇಲಾಖೆ)

ನಂ. ವಾತೆಜಂಆ(ಆ)/ಬೆ/ಖಾ.ವಾ.ಶಾ./2017-18/ಬಿ-

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ,
"ಸುಮೌಲ್ಯ ಸೌಧ" ಕ್ಲಬ್ ರಸ್ತೆ ಬೆಳಗಾವಿ ವಿಭಾಗ,
ಬೆಳಗಾವಿ.

ದಿನಾಂಕ : 10-07-2017

## : ಪ್ರಕಟಣೆ :

ವಿಷಯ : ಈ ವಿಭಾಗದ ವಿವಿಧ ಕಛೇರಿಗಳಿಗೆ ಸರಕಾರಿ ಅಧಿಕೃತ ಕೆಲಸಕ್ಕೆ 10 (ಹತ್ತು) ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಸಾಮಾನ್ಯ ಟೆಂಡರ ಪ್ರಕ್ರಿಯೆ ಮುಖೇನ ಪಡೆಯುವ ಬಗ್ಗೆ.

ಉಲ್ಲೇಖ : ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ಕಛೇರಿ ಸುತ್ತೋಲೆ-1ರ ಪತ್ರ ಸಂಖ್ಯೆ : ವಿಹೆಚ್‌ಟಿ/ಸಿಆರ್-11/2017-18 ದಿನಾಂಕ : 04-07-2017.

* * * * *

ಈ ವಿಭಾಗದ ಕೆಳಕಂಡ ಕಛೇರಿಗಳಿಗೆ ದಿನಾಂಕ : 01-08-2017 ರಿಂದ 31-07-2018ರ ಅವಧಿಗೆ ಸರ್ಕಾರಿ ಅಧಿಕೃತ ಕೆಲಸಕ್ಕೆ ಮಾಸಿಕ ಬಾಡಿಗೆ ಆಧಾರದ ಮೇಲೆ 10 (ಹತ್ತು) ಖಾಸಗಿ ವಾಹನಗಳ ಅವಶ್ಯಕತೆ ಇರುತ್ತದೆ.

| ಕ್ರ. ಸಂ. | ಕಛೇರಿಯ ಹೆಸರು | ವಾಹನಗಳ ಸಂಖ್ಯೆ | ಅರ್ಜಿ ಸಲ್ಲಿಸಬೇಕಾದ ಕಛೇರಿ |
|---|---|---|---|
| 1 | ಸುಮೌಲ್ಯ ಸೌಧದ ಕಟ್ಟಡದಲ್ಲಿನ ಲೆಕ್ಕಪರಿಶೋಧನೆ / ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಕಛೇರಿ-380, 390, ಬೆಳಗಾವಿ | 5 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ಸುಮೌಲ್ಯ ಸೌಧ, ಕ್ಲಬ್ ರಸ್ತೆ, ಬೆಳಗಾವಿ |
| 2 | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, ಎಲ್.ವ್ಹಿ.ಓ.-405, ಗೋಕಾಕ | 1 | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, ಎಲ್.ವ್ಹಿ.ಓ.-405, ಫಾಲ್ಸ್ ರಸ್ತೆ, ಗೋಕಾಕ |
| 3 | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, ಎಲ್.ವ್ಹಿ.ಓ.-410, ಬೈಲಹೊಂಗಲ | 1 | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, ಎಲ್.ವ್ಹಿ.ಓ.-410, ಮುರಗೋಡ ರಸ್ತೆ, ಬೈಲಹೊಂಗಲ |
| 4 | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, ಎಲ್.ವ್ಹಿ.ಓ.-440, ವಿಜಯಪುರ | 1 | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, ಎಲ್.ವ್ಹಿ.ಓ.-440, ಅಪಜ್ಜಲ್‌ಪುರ ಟಕ್ಕೆ, ವಿಜಯಪುರ |
| 5 | ಲೆಕ್ಕಪರಿಶೋಧನೆ / ಲೆಕ್ಕಪರಿಶೋಧನೆ & ವಸೂಲಿ, ಬಾಗಲಕೋಟ | 1 | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಲೆಕ್ಕಪರಿಶೋಧನೆ), ಮಿನಿ ವಿಧಾನ ಸೌಧ, ನವ ನಗರ, ಬಾಗಲಕೋಟ |
| 6 | ವಾಣಿಜ್ಯ ತೆರಿಗೆ ಅಧಿಕಾರಿ, ವ್ಹಿ.ಎಸ್.ಓ -421 ಮುದ್ದೇಬಿಹಾಳ | 1 | ವಾಣಿಜ್ಯ ತೆರಿಗೆ ಅಧಿಕಾರಿ, ವ್ಹಿ.ಎಸ್.ಓ -421 ಮುದ್ದೇಬಿಹಾಳ |

ಸದರಿ ವಾಹನಗಳನ್ನು ಪೂರೈಸಲು ಷರತ್ತುಗಳು ಈ ಕೆಳಗಿನಂತಿವೆ.

**ಷರತ್ತುಗಳು :-**

1) ವಾಹನವು ಹಳದಿ ಬೋರ್ಡ್ ಹೊಂದಿರತಕ್ಕದ್ದು. ವಾಹನಕ್ಕೆ ಮತ್ತು ಚಾಲಕರಿಗೆ ಸಂಬಂಧಿಸಿದ ದಾಖಲೆಗಳನ್ನು (ಮಾಲಿಕರೇ ಚಾಲಕರಾಗಿದ್ದ ಪ್ರಕರಣಗಳಲ್ಲಿ, ಅವರ ಖಾಯಂ ಹಾಗೂ ಪ್ರಸ್ತುತ ವಿಳಾಸದ ವಾಸ ದೃಢೀಕರಣ ಪತ್ರ, ದೂರವಾಣಿ ಸಂಖ್ಯೆ, ಭಾವಚಿತ್ರ, ವಾಹನದ ನೋಂದಣಿ ಪ್ರಮಾಣ ಪತ್ರ, ಚಾಲನಾ ಪರವಾನಗಿ, ವಿಮಾ ಪಾಲಿಸಿ, ತೆರಿಗೆ ಪಾವತಿ ಪ್ರಮಾಣ ಪತ್ರ, ವೃತ್ತಿ ತೆರಿಗೆ ಪ್ರಮಾಣ ಪತ್ರ) ಸಲ್ಲಿಸುವುದು.

2) ಅರ್ಜಿಯನ್ನು ವಾಹನದ ದಾಖಲೆಗಳೊಂದಿಗೆ ಸೀಲ್ ಮಾಡಿದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು. (ಸರ್ಕಾರಿ ಆದೇಶದ ಆಧಾರದ ಮೇಲೆ ವಾಹನಕ್ಕೆ 2,500 ಕಿ.ಮೀ.ಗೆ ಗರಿಷ್ಟ ಮಾಸಿಕ ಮೊತ್ತ ರೂ.25,000/- ನಂತೆ, ತದನಂತರ ಓಡಿದಲ್ಲಿ ಪ್ರತಿ ಕಿ.ಮೀ. ರೂ.5.50/-ರಂತೆ ನೀಡಲಾಗುವುದು).

3) 2013 ಮತ್ತು ಆ ನಂತರದ ವರ್ಷಗಳ ಮಾದರಿಯ ಉನ್ನತ ಮಟ್ಟದ ವಾಹನಗಳು ಅಂದರೆ ಟಾಟಾ ಸೋಮೊ, ಮಹೇಂದ್ರಾ ಬುಲೇರ, ಚೇವರೇಲ್ಟೆಟ ಎಂಜಾಯ್, ಎರಿಟಿಗಾ, ಇನ್ನೋವಾ, ಮಹೀಂದ್ರಾ ಸ್ಯಾಲೊ, ಮಹೀಂದ್ರಾ ಸ್ಕಾರ್ಪಿಯೋ, ಮಹೀಂದ್ರಾ ಟಿಯುವಿ-300, ರೇನಾಲ್ಡ ಡಸ್ಟರ್, ಟಾಟಾ ಎರಿಯಾ, ಹಾಗೂ ಟಾಟಾ ಹೇಕ್ಸಾ, ಫೋರ್ಡ್, ಫಿಯೆಟ್ ಪ್ಯಾಲಿಯೋ, ಚಾರ್ವಲೇಟ್ ಜಾಯ್, ಸ್ಕಾರ್ಪಿಯೋ, ಇನ್ನೋವಾ, ಮಹೀಂದ್ರಾ ಎಕ್ಸ್.ಯು.ವ್ಹಿ. ಮತ್ತು ಬುಲೆರೋ ವಾಹನಗಳನ್ನು ಮಾತ್ರ ಪಡೆಯಲಾಗುವುದು. (2016 ಹಾಗೂ 2017ರ ಹೊಸ ಮಾದರಿಯ ವಾಹನಗಳಿಗೆ ಆದ್ಯತೆ ನೀಡಲಾಗುವುದು).

4) ಮಾಲೀಕರೆ ವಾಹನದ ಚಾಲಕರು / ಟ್ರಾವೆಲ್ ಏಜನ್ಸಿದಾರರು / ಸಂಸ್ಥೆಯಾದಲ್ಲಿ / ವಾಹನ ಸೇವೆಯ ಅನುಭವದ ಬಗ್ಗೆ ದಾಖಲೆಗಳು, ಇ.ಎಸ್.ಐ. ಮತ್ತು ಪಿ.ಎಫ್.ಗಳ ದಾಖಲೆಗಳು ಹಾಗೂ ಏಜನ್ಸಿ ಸಂಸ್ಥೆಯ ನೋಂದಣಿ ದಾಖಲಾತಿಗಳ ಪ್ರತಿಗಳನ್ನು, ಖಾಯಂ ಹಾಗೂ ಪ್ರಸ್ತುತ ವಿಳಾಸದ ವಾಸ ದೃಢೀಕರಣ ಪತ್ರ, ದೂರವಾಣಿ ಸಂಖ್ಯೆ, ಭಾವಚಿತ್ರ, ವಾಹನದ ನೋಂದಣಿ ಪ್ರಮಾಣ ಪತ್ರ, ಚಾಲನಾ ಪರವಾನಗಿ, ವಿಮಾ ಪಾಲಿಸಿ, ತೆರಿಗೆ ಪಾವತಿ ಪ್ರಮಾಣ ಪತ್ರ, ವೃತ್ತಿ ತೆರಿಗೆ ಪ್ರಮಾಣ ಪತ್ರ ಸಲ್ಲಿಸುವುದು.

5) ಟೋಲ್ ನಾಕಾದಲ್ಲಿಯ ರಸ್ತೆ ಶುಲ್ಕವನ್ನು ವಾಹನದ ಮಾಲೀಕರೆ ಭರಿಸುವುದು.

6) ವಾಹನಗಳು ಕರ್ನಾಟಕ ರಾಜ್ಯದಲ್ಲಿ ನೋಂದಣಿ ಹಾಗೂ ಟ್ಯಾಕ್ಸಿ ಪರ್ಮಿಟ್ ಹೊಂದಿರಬೇಕು.

7) ವಾಹನಗಳನ್ನು ಕಛೇರಿಯ ಸಮಯದ ನಂತರ ಕಡ್ಡಾಯವಾಗಿ ಕಛೇರಿಯ ಆವರಣದಲ್ಲಿ ನಿಲ್ಲಿಸಿ, ಸಂಬಂಧಿಸಿದ ಅಧಿಕಾರಿಯವರಿಗೆ ಮಾಹಿತಿ ನೀಡಿ ಹೋಗಬೇಕು.

8) ವಾಹನವು ಸುಸ್ಥಿತಿಯಲ್ಲಿರಬೇಕು ಮತ್ತು ದುರಸ್ಥಿ (ರಿಪೇರಿ & ಮೆಂಟೆನೆನ್ಸ್) ಮತ್ತು ಡಿಸೇಲ್ ಅಥವಾ ಪೆಟ್ರೋಲ್ ವಾಹನದ ಮಾಲೀಕರಿಗೆ ಸಂಬಂಧಿಸಿದ್ದು.

9) ಚಾಲಕರು ವಾಹನ ಚಲಿಸುವ ವೇಳೆಯಲ್ಲಿ ಕಡ್ಡಾಯವಾಗಿ ಮೊಬೈಲನ್ನು ಬಳಸಬಾರದು ಹಾಗೂ ಬಿಳಿ ಸಮವಸ್ತ್ರವನ್ನು ಧರಿಸಬೇಕು.

10) ಅನುದಾನದ ಲಭ್ಯತೆಯ ಮೇರೆಗೆ ಬಿಲ್ಲನ್ನು ಸಂದಾಯ ಮಾಡಲಾಗುವುದು.

11) ಸಂಬಂಧಿಸಿದ ಇತರೆ ತೆರಿಗೆಗಳನ್ನು ಕಡಿತಗೊಳಿಸಿ ಬಿಲ್ಲನ್ನು ಸಂದಾಯ ಮಾಡಲಾಗುವುದು.

12) ವಾಹನವು ದುರಸ್ಥಿಗೆ ಬಂದಲ್ಲಿ ತಕ್ಷಣ ಬೇರೆ ವಾಹನದ ವ್ಯವಸ್ಥೆ ಮಾಡತಕ್ಕದ್ದು.

13) ವಾಹನದ ಅಥವಾ ಮಾಲೀಕರ ಮೇಲೆ ದೂರುಗಳು ಬಂದಲ್ಲಿ ವಿಚಾರಣೆ ನಡೆಸಿ ಯೋಗ್ಯ ಕ್ರಮ ಕೈಕೊಳ್ಳಲಾಗುವುದು.

14) ವಾಹನವನ್ನು ಹಾಗೂ ವಾಹನದ ಮಾಲೀಕರ ಚಾಲನೆಯನ್ನು ಪರಿಶೀಲಿಸಿದ ನಂತರ ಹಾಗೂ ಎಲ್ಲ ಷರತ್ತುಗಳನ್ನು ಪೂರೈಸಿದ ವಾಹನಗಳನ್ನು ಪಡೆದುಕೊಳ್ಳಲಾಗುವುದು.

**15) ಅಂತಿಮ ನಿರ್ಧಾರವನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ಬೆಳಗಾವಿ ಇವರು ತೆಗೆದುಕೊಳ್ಳಲು ಅಧಿಕಾರ ಹೊಂದಿರುತ್ತಾರೆ.**

ಮೇಲೆ ತಿಳಿಸಿದ ಎಲ್ಲ ಷರತ್ತುಗಳನ್ನು ಒಪ್ಪಿದಲ್ಲಿ ಈ ಕಛೇರಿಯ ಕಾರ್ಯಾಲಯದಲ್ಲಿ **ದಿನಾಂಕ : 27-07-2017 ರ ಸಾಯಂಕಾಲ 5.30ರೊಳಗೆ** ಮೇಲೆ ನಮೂದಿಸಿದ ದಾಖಲಾತಿಗಳ ಪ್ರತಿಗಳೊಂದಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ಸರಕು ಮತ್ತು ಸೇವಾ ತೆರಿಗೆ ಬೆಳಗಾವಿ ವಿಭಾಗ,
ಬೆಳಗಾವಿ.

ಪ್ರತಿಯನ್ನು :

1) ಈ ಕಛೇರಿಗಳ ಸೂಚನಾ ಫಲಕಕ್ಕೆ.

2) ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ / ವಿಜಯಪುರ / ಬಾಗಲಕೋಟ ಇವರ ಕಛೇರಿಯ ಸೂಚನಾ ಫಲಕಕ್ಕೆ.

3) ಸಾರಿಗೆ ಅಧಿಕಾರಿಗಳು, ಬೆಳಗಾವಿ / ವಿಜಯಪುರ / ಬಾಗಲಕೋಟ ಇವರ ಕಛೇರಿಯ ಸೂಚನಾ ಫಲಕಕ್ಕೆ.

ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆ ಇಲಾಖೆ)

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ,_"ಸುಮೌಲ್ಯ ಸೌಧ" ಕ್ಲಬ್ ರಸ್ತೆ ಬೆಳಗಾವಿ ವಿಭಾಗ, ಬೆಳಗಾವಿ.

ದೂರವಾಣಿ ಸಂಖ್ಯೆ: 0831-2407366

ಸಂ. ವಾತೆಜಂಆ(ಆ)/ಬೆ/ಖಾ.ವಾ.ಶಾ/2017-18/ 29/157 ದಿನಾಂಕ : 10-07-2017

**:ಟೆಂಡರ್ ಅಧಿಸೂಚನೆ:**

ಈ ವಿಭಾಗದ ವಾಣಿಜ್ಯ ತೆರಿಗೆ ಕಛೇರಿಗಳಾದ (ಬೆಳಗಾವಿ-5, ವಿಜಯಪುರ-1, ಬೈಲಹೊಂಗಲ-1, ಗೋಕಾಕ-1, ಮುದ್ದೇಬಿಹಾಳ-1 & ಬಾಗಲಕೋಟೆ-1) ಒಟ್ಟು ಹತ್ತು (10) ವಾಹನಗಳನ್ನು, ಮಾಲೀಕರೆ ಚಾಲಕರು / ಟ್ರಾವೆಲ್ ಏಜನ್ಸಿದಾರರು / ಸಂಸ್ಥೆ ಇವರಿಂದ ಮಾಸಿಕ ಬಾಡಿಗೆ ಆಧಾರದ ಮೇಲೆ ಸರ್ಕಾರಿ ಆದೇಶದ ಆಧಾರದ ಮೇಲೆ ವಾಹನಕ್ಕೆ 2,500 ಕಿ.ಮೀ.ಗೆ ಗರಿಷ್ಟ ಮಾಸಿಕ ಮೊತ್ತ ರೂ. 25,000/- ನಂತೆ, ತದನಂತರ ಅಧಿಕ ಕಿ.ಮೀ. ಓಡಿದಲ್ಲಿ ಪ್ರತಿ ಕಿ.ಮೀ. ರೂ. 5.50/- ರಂತೆ ಪಡೆಯಲು ನಿಶ್ಚಯಿಸಲಾಗಿದೆ. ಈ ಕುರಿತು ದಿನಾಂಕ: 10-07-2017 ರಂದು ಇಲಾಖೆಯ ಸೂಚನಾ ಫಲಕದಲ್ಲಿ ಹಾಗೂ http://ctax.kar.nic.in ನಲ್ಲಿ ಸಂಬಂಧಿಸಿದ ವಿವರವಾದ ಷರತ್ತುಗಳನ್ನು ಪ್ರಕಟಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 27-07-2017 (ಸಮಯ 5.00 ಗಂಟೆಯವರೆಗೆ), ವಾಗಿರುತ್ತದೆ. ಅರ್ಜಿಯನ್ನು ವಾಹನದ ಸಂಪೂರ್ಣ ದಾಖಲೆಗಳೊಂದಿಗೆ ಸೀಲ್ ಮಾಡಿದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು, ಹೆಚ್ಚಿನ ವಿವರಗಳಿಗಾಗಿ ಕಛೇರಿಇ ಸಮಯದೊಳಗೆ ವಾಹನ ಶಾಖೆಗೆ ಅಥವಾ ಸಹಾಯ ಪೀಠಕ್ಕೆ ದೂರವಾಣಿ: 0831-2407366 ಯಲ್ಲಿ ಸಂಪರ್ಕಿಸಬಹುದು.

S. Biz
Sd/-
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ಸರಕು ಮತ್ತು ಸೇವಾ ತೆರಿಗೆ ಬೆಳಗಾವಿ ವಿಭಾಗ,
ಬೆಳಗಾವಿ.